# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189–ಹೊಂಗಸಂದ್ರ,

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 17.07.2021 ರಂದು ಸಂಜೆ 03:00 ಘಂಟೆಗೆ Ward DETER Commitee ಅನ್ನು 189–ಹೊಂಗಸಂದ್ರ ಡಾ|| ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ. ಆರ್ | ಅಧ್ಯಕ್ಷರು/ನೋಡಲ್ ಅಧಿಕಾರಿಗಳು<br>ಕಾರ್ಯಪಾಲಕ ಅಭಿಯಂತರರು<br>ಬೃಹತ್ ನೀರುಗಾಲುವೆ ವಿಭಾಗ |
| 2 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು<br>ವಾರ್ಡ್ ಸಂ. 189 |
| 3 | ಶ್ರೀ ಎಂ ಮುನಿರಾಜು | ಸದಸ್ಯರು |
| 4 | ಶ್ರೀ ನಾಗಭೂಷಣ್ ಆರ್ | ಸದಸ್ಯರು |
| 5 | ಶ್ರೀ ಕೋದಂಡ ರಾಮ ರೆಡ್ಡಿ | ಸದಸ್ಯರು |
| 6 | ಶ್ರೀ ಡಾ|| ರಂಗರಾಜು ಬಿ. | ಪ್ರಾಥಮಿಕ ಆರೋಗ್ಯ ಕೇಂದ್ರ, ಹೊಂಗಸಂದ್ರ |
| 7 | ಶ್ರೀ ವೆಂಕಟೇಶಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ಹೊಂಗಸಂದ್ರ |
| 8 | ಶ್ರೀ ವಿನೋದ್ ಕುಮಾರ್ ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ಹೊಂಗಸಂದ್ರ |
| 9 | ಶ್ರೀ ಸಂತೋಷ ಪ್ರಸಾದ | ಸಹಾಯಕ ಅಭಿಯಂತರರು,<br>ಬಿ.ಡಬ್ಲ್ಯೂ.ಎಸ್.ಎಸ್.ಬಿ ಹೊಂಗಸಂದ್ರ |
| 10 | ಶ್ರೀ ತಿಪ್ಪರಾಜು | ಕಂದಾಯ ಪರಿವೀಕ್ಷಕರು, ಹೊಂಗಸಂದ್ರ |
| 11 | ಶ್ರೀ ದೀಪಕ್ ಸವಾಡಕಾರ್ | ಕಂದಾಯ ನಿರೀಕ್ಷಕರು, ಹೊಂಗಸಂದ್ರ |
| 12 | ಶ್ರೀ ಕುಮಾರ್ ಹೆಚ್ | ಕಂದಾಯ ನಿರೀಕ್ಷಕರು, ಹೊಂಗಸಂದ್ರ |
| 13 | ಶ್ರೀ ಸ್ವಾಮಿ.ಡಿ, | ಕಿರಿಯ ಅಭಿಯಂತರರು, ಬೆಸ್ಕಾಂ |
| 14 | ಶ್ರೀ ಕೆ.ಎಸ್. ಲೋಕೇಶ್ | ಪೋಲಿಸ್ ಇನ್ಸ್‌ಪೆಕ್ಟರ್, |
| 15 | ಶ್ರೀ ಹರೀಶ್ ಹೆಚ್.ಆರ್ | ಅರಣ್ಯಾಧಿಕಾರಿಗಳು |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲರ ಸಹಕಾರದೊಂದಿಗೆ ಕೋವಿಡ್–19 ಹರಡುವಿಕೆಯು ಈ ವಾರ್ಡ್‌ನಲ್ಲಿ ಇಳಿಮುಖವಾಗಿದೆ ಎಂದು ವೈದ್ಯರು ತಿಳಿಸಿದರು.

ಶ್ರೀ ಡಾ|| ರಂಗರಾಜು ರವರು ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿನಿತ್ಯ 45 ವರ್ಷ ವಯಸ್ಸು ಮೇಲ್ಪಟವರಿಗೆ ಕೋವಿಡ್ ಲಸಿಕೆಯನ್ನು ಸುಮಾರು ಪ್ರತಿದಿನ 100 ಜನಕ್ಕೆ ನೀಡಲಾಗುತ್ತಿದೆ. ಹಾಗೂ RTPCR & Rapid ಸೇರಿ ದಿನಕ್ಕೆ 475 Testing ನಡೆಸಲಾಗುತ್ತಿದೆ ಎಂದು ವೈದ್ಯರು ಸಭೆಗೆ ತಿಳಿಸಿರುತ್ತಾರೆ.

- ವಿವೇಕಾನಂದ ನಗರ ಬಡಾವಣೆ 2ನೇ, 3ನೇ ಮತ್ತು 4ನೇ ಅಡ್ಡ ರಸ್ತೆಯಲ್ಲಿ ಬೆಸ್ಕಾಂ ಲೈನ್ ವೈರ್ ಒಂದಕ್ಕೊಂದು ತಗಲಿ ಶಾಟ್‌ಸರ್ಕ್ಯುಟ್‌ಯಾಗಿದ್ದು, ಅದರಂತೆ ಸ್ಥಳೀಯ ನಾಗರೀಕರಿಗೆ ತೊಂದರೆಯಾಗಿರುತ್ತಿರುವ ಬಗ್ಗೆ ಶ್ರೀ ಕೋದಂಡ ರಾಮ ರೆಡ್ಡಿ ಸದಸ್ಯರು ರವರು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಬೆಸ್ಕಾಂ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ.
- ಬೇಗೂರು ಮುಖ್ಯ ರಸ್ತೆ ಮತ್ತು ಓಣಿ ರಸ್ತೆ ಬ್ರಿಡ್ಜ್ ಹತ್ತಿರದಿಂದ ಸ್ಮಶಾನ ರಸ್ತೆ ವರೆಗೂ ಒಳಚರಂಡಿ ಪೈಪ್ ಪೈಲ್ ಲೈನ್ ಮಾರ್ಗ ಹಾಳಾಗಿದ್ದು, ಕೂಡಲೇ ಬದಲಾಯಿಸುವಂತೆ ಸಭೆಯಲ್ಲಿ ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ.
- ಒಂಟಿ ಮನೆ ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳ ವಿವರದ ಬಗ್ಗೆ ಮಾಹಿತಿಯನ್ನು ನೀಡುವಂತೆ ಸಭೆಯಲ್ಲಿ ಸದಸ್ಯರಾದ ಶ್ರೀ ಮುನಿರಾಜು ರವರು ಕೋರಿರುತ್ತಾರೆ. ಈ ಬಗ್ಗೆ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡುವಂತೆ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ರವರು ಸೂಚಿಸಿರುತ್ತಾರೆ.
- ಸಭೆಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳು ರವರು ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆಗಳಲ್ಲಿ ರಸ್ತೆಗಳ ನಾಮಫಲಕಗಳ ಮೇಲೆ ಪಾಲಿಕೆ ಸದಸ್ಯರುಗಳ ಹೆಸರುಗಳನ್ನು ತೆಗೆಸಲು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕ್ರಮ ವಹಿಸುಂತೆ ಸೂಚಿಸಿರುತ್ತಾರೆ.
- ಕೋವಿಡ್-19 3ನೇ ಅಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವುದು, ಜಾಗೃತಿ ಅಭಿಯಾನ ಹಮ್ಮಿಕೊಳುವುದು, ಹೆಚ್ಚಾಗಿ ಆರೈಕೆ ಕೇಂದ್ರವನ್ನು ಸ್ಥಾಪಿಸುವುದು, ಹಾಗೂ ಪ್ರತ್ಯೇಕವಾಗಿ ಮಕ್ಕಳ ಆಸ್ಪತ್ರೆಯನ್ನು ಸ್ಥಾಪಿಸುವುದು ಮತ್ತು ಕಂದಾಯ ಇಲಾಖೆಯೊಂದಿಗೆ, ಸ್ವಯಂ ಸೇವಕರು, ಸದ್ಯಸರು ಜೊತೆಗೆ ಮನೆ ಮನೆಗಳಿಗೆ ಬೇಟಿ ನೀಡಿ ಲಸಿಕೆಯ ಬಗ್ಗೆ ಅರಿವು ಮೂಡಿಸಲು ಸದ್ಯಸರು, ಸ್ವಯಂ ಸೇವಕರು ಒಮ್ಮತದಿಂದ ವಾರ್ಡ್ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

17/7/21

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ.

Scanned with